ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 554(420)
ಮಾನ್ಯ ಸದಸ್ಯರ ಹೆಸರು : ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು
ಉತ್ತರಿಸಬೇಕಾದ ದಿನಾಂಕ : 05-02-2021.

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಮಹಿಳೆಯರಿಗೆ ಸ್ವಯಂ ಉದ್ಯೋಗ ಮಾಡಲು ಯಾವ ಯಾವ ಯೋಜನೆಗಳಿವೆ; ಯಾವ ರೀತಿ ಧನ ಸಹಾಯ ಮಾಡಲಾಗುವುದು:	ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮಹಿಳೆಯರ ಸ್ವಯಂ ಉದ್ಯೋಗಕ್ಕಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. 1.ಉದ್ಯೋಗಿನಿ ಯೋಜನೆ 2.ಚೇತನಾ ಯೋಜನೆ 3.ಧನಶ್ರೀ ಯೋಜನೆ 4.ಲಿಂಗತ್ವ ಅಲ್ಪಸಂಖ್ಯಾತರಿಗೆ ಪುನರ್ವಸತಿ ಯೋಜನೆ 5.ಬಡ್ಡಿ ಸಹಾಯಧನ ಯೋಜನೆ (ಕೆ.ಎಸ್.ಎಫ್.ಸಿ ಮುಖಾಂತರ) 6.ದೇವದಾಸಿ ಪುನರ್ವಸತಿ ಯೋಜನೆ ಮೇಲ್ಕಂಡ ಯೋಜನೆಗಳಲ್ಲಿ ಸಾಲ ಮತ್ತು ಸಹಾಯಧನದ ರೂಪದಲ್ಲಿ ಅರ್ಹ ಮಹಿಳೆಯರಿಗೆ ಧನ ಸಹಾಯ ನೀಡಲಾಗುವುದು.
ಆ	ಯಾವ ಯಾವ ಯೋಜನೆಗಳಲ್ಲಿ ಎಷ್ಟೆಷ್ಟು ಸಾಲ/ಸಬ್ಸಿಡಿ ನೀಡಲಾಗುತ್ತಿದೆ: ಎಷ್ಟು ಫಲಾನುಭವಿಗಳಿಗೆ ಎಷ್ಟು ಹಣವನ್ನು ಕಳೆದ ಎರಡು ವರ್ಷಗಳಲ್ಲಿ ನೀಡಲಾಗಿದೆ:	ಯೋಜನೆಗಳ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. ಫಲಾನುಭವಿಗಳ ಸಂಖ್ಯೆ ಹಾಗೂ ನೀಡಲಾದ ಆರ್ಥಿಕ ಸೌಲಭ್ಯಗಳ ಮಾಹಿತಿಯನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.
ಇ	ಫಲಾನುಭವಿಗಳನ್ನು ಆಯ್ಕೆ ಮಾಡಲು ಇರುವ ಮಾನದಂಡಗಳೇನು?	ವಿವರವನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ.

ಸಂಖ್ಯೆ: ಮಮಇ 16 ಮಅನಿ 2021

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಸಚಿವರು.

ಅನುಬಂಧ-1

1. ಉದ್ಯೋಗಿನಿ ಯೋಜನೆ:

ಈ ಯೋಜನೆಯಡಿ ಯೋಜನಾ ವೆಚ್ಚಕ್ಕಾನುಸಾರವಾಗಿ ಬ್ಯಾಂಕಿನಿಂದ 1 ಲಕ್ಷದಿಂದ 3 ಲಕ್ಷಗಳವರೆಗೆ ಸಾಲ ಮಂಜೂರಾತಿ ಮಾಡಲಾಗುವುದು ನಿಗಮದಿಂದ ಇತರೆ ವರ್ಗದ ಮಹಿಳೆಯರಿಗೆ ಬ್ಯಾಂಕ್ ಸಾಲದ ಶೇ.30 ರಷ್ಟು ಅಥವಾ ಗರಿಷ್ಟ ರೂ 90,000/- ದ ವರೆಗೆ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಬ್ಯಾಂಕ್ ಸಾಲದ ಶೇ.50 ರಷ್ಟು ಅಥವಾ ಗರಿಷ್ಟ ರೂ 1.50 ಲಕ್ಷಗಳವರೆಗೆ ಸಹಾಯ ಧನವನ್ನು ಬಿಡುಗಡೆ ಮಾಡಲಾಗುವುದು.

2. ಚೇತನಾ ಯೋಜನೆ:

ಈ ಯೋಜನೆಯಡಿ ದಮನಿತ (ಲೈಂಗಿಕ ಕಾರ್ಯಕರ್ತೆಯರು) ಮಹಿಳೆಯರಿಗೆ ರೂ.25,000/- ಗಳ ಸಾಲ ಮತ್ತು ರೂ.25,000/- ಗಳ ಸಹಾಯಧನ ಒಟ್ಟು ರೂ.50,000/- ಗಳ ಸೌಲಭ್ಯವನ್ನು ನಿಗಮದಿಂದ ನೇರವಾಗಿ ಒದಗಿಸಲಾಗುವುದು.

3. ಧನಶ್ರೀ ಯೋಜನೆ:

ಈ ಯೋಜನೆಯಡಿ ಹೆಚ್.ಐ.ವಿ. ಸೋಂಕಿತ ಹಾಗೂ ಬಾಧಿತ ಮಹಿಳೆಯರಿಗೆ ರೂ.25,000/- ಗಳ ಸಾಲ ಮತ್ತು ರೂ.25,000/- ಗಳ ಸಹಾಯಧನ ಒಟ್ಟು ರೂ.50,000/- ಗಳ ಸೌಲಭ್ಯವನ್ನು ನಿಗಮದಿಂದ ನೇರವಾಗಿ ಒದಗಿಸಲಾಗುವುದು.

4. ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ:

ಈ ಯೋಜನೆಯಡಿ ಲಿಂಗತ್ವ ಅಲ್ಪಸಂಖ್ಯಾತರಿಗೆ ರೂ.25,000/- ಗಳ ಸಾಲ ಮತ್ತು ರೂ.25,000/- ಗಳ ಸಹಾಯಧನ ಒಟ್ಟು ರೂ.50,000/- ಗಳ ಸೌಲಭ್ಯವನ್ನು ನಿಗಮದಿಂದ ನೇರವಾಗಿ ಒದಗಿಸಲಾಗುವುದು.

5. ಬಡ್ಡಿ ಸಹಾಯಧನ ಯೋಜನೆ (ಕೆ.ಎಸ್.ಎಫ್.ಸಿ ಮೂಲಕ)

ಮಹಿಳಾ ಉದ್ದಿಮೆದಾರರು ಸಣ್ಣ ಮತ್ತು ಮದ್ಯಮ ಉದ್ದಿಮೆಗಳನ್ನು ಸ್ಥಾಪಿಸಲು ರೂ.50.00 ಲಕ್ಷಗಳಿಂದ ರೂ.200.00 ಲಕ್ಷಗಳವರೆಗೆ ಸಾಲವನ್ನು ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಒದಗಿಸಿದಾಗ, ಶೇ.14 ರ ಬಡ್ಡಿಯಲ್ಲಿ ಶೇ.10 ರ ಬಡ್ಡಿಯ ಸಹಾಯಧನವನ್ನು ಕ.ರಾ.ಮ.ಅ.ನಿಗಮದ ಮೂಲಕ ಒದಲಾಗಿಸಲಾಗುವುದು.

6. ದೇವದಾಸಿ ಪುನರ್ವಸತಿ ಯೋಜನೆ:

1993-94 ಮತ್ತು 2007-08ನೇ ಸಾಲಿನಲ್ಲಿ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಸಮೀಕ್ಷೆ ಮಾಡಿ ಗುರುತಿಸಲಾದ ಮಾಜಿ ದೇವದಾಸಿಯರಿಗೆ ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳಲು ನಿಗಮದಿಂದ ರೂ.25,000/- ಗಳ ಸಾಲ ಮತ್ತು ರೂ.25,000/- ಗಳ ಸಹಾಯಧನ ಒಟ್ಟು ರೂ.50,000/- ಗಳ ಸೌಲಭ್ಯವನ್ನು ನಿಗಮದಿಂದ ನೇರವಾಗಿ ಒದಗಿಸಲಾಗುವುದು.

ಅನುಬಂಧ–2

ಕ್ರಸಂ	ಯೋಜನೆಯ ಹೆಸರು	ಫಲಾನುಭವಿಗಳ ಸಂಖ್ಯೆ		ಆರ್ಥಿಕ	
		2018–19	2019–20	2018–19	2019–20
1	ಉದ್ಯೋಗಿನಿ ಯೋಜನೆ	2295	4557	2530.00	2530.00
2	ಚೇತನಾ ಯೋಜನೆ	404	304	205.00	205.00
3	ಧನಶ್ರೀ ಯೋಜನೆ	985	985	500.00	500.00
4	ಲಿಂಗತ್ವ ಅಲ್ಪಸಂಖ್ಯಾತರಿಗೆ ಪುನರ್ವಸತಿ ಯೋಜನೆ	650	709	329.80	359.82
5	ಬಡ್ಡಿ ಸಹಾಯಧನ ಯೋಜನೆ (ಕೆ.ಎಸ್.ಎಫ್.ಸಿ ಮುಖಾಂತರ)	771	300	3294.00	1000.00
6	ದೇವದಾಸಿ ಪುನರ್ವಸತಿ ಯೋಜನೆ	1126	589	113.44	593.41

ಅನುಬಂಧ-3

ಕ್ರಸಂ	ಫಲಾನುಭವಿ ಆಧಾರಿತ ಯೋಜನೆ/ಕಾರ್ಯ ಕ್ರಮ	ಅನುಷ್ಠಾನಗೊಳಿಸಲು ಅನುಸರಿಸುತ್ತಿರುವ ಮಾನದಂಡಗಳು
1	ಉದ್ಯೋಗಿನಿ	1. ಕುಟುಂಬದ ವಾರ್ಷಿಕ ಆದಾಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರೂ.2,00,000/-ಗಳು ಹಾಗೂ ವಿಶೇಷ ವರ್ಗ ಹಾಗೂ ಸಾಮಾನ್ಯ ವರ್ಗದ ಮಹಿಳೆಯರಿಗೆ ರೂ.1,50,000/-ಗಳಿಗೆ ಮೀರಿರಬಾರದು. 2. ಎಲ್ಲಾ ವರ್ಗದ ಮಹಿಳೆಯರಿಗೆ ವಯೋಮಿತಿ 18 ರಿಂದ 55 ವರ್ಷಗಳು. 3. ಸಾಲ ಮಂಜೂರಾದ ನಂತರ ಉದ್ಯಮಶೀಲತ ತರಬೇತಿಗೆ ಕಡ್ಡಾಯವಾಗಿ ಹಾಜರಾಗಬೇಕು. 4. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ ಸೀಡಿಂಗ್ ಆಗಿರಬೇಕು. 5. ಮಾನ್ಯ ವಿಧಾನ ಸಭಾ ಸದಸ್ಯರ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳ ಆಯ್ಕೆ ಮಾಡಲಾಗುತ್ತದೆ.
2	ಚೇತನ ಯೋಜನೆ	1. ವಯೋಮಿತಿ 18 ವರ್ಷ ಮೀರಿರಬೇಕು. 2.ಲೈಂಗಿಕ ಕಾರ್ಯಕರ್ತೆಯರ ಸಮುದಾಯ ಆಧಾರಿತ ಸಂಸ್ಥೆಯ ಗುರುತಿನ ಚೀಟಿ ಹೊಂದಿರಬೇಕು 3.ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ ಸೀಡಿಂಗ್ ಆಗಿರಬೇಕು. 4.ಯಾವುದೇ ಬ್ಯಾಂಕು/ಸಂಸ್ಥೆಗಳಲ್ಲಿ ಸುಸ್ತಿದಾರರಾಗಿರಬಾರದು ಎನ್ನುವುದು ಕಡ್ಡಾಯವಾಗಿರುತ್ತದೆ. 5.ಎಲ್ಲಾ ವರ್ಗದ ದಮನಿತ ಮಹಿಳೆಯರಿಗೆ ಇ.ಡಿ.ಪಿ. ತರಬೇತಿಯೊಂದಿಗೆ ಸೌಲಭ್ಯ ನೀಡಲಾಗುತ್ತದೆ. 6.ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆಮಾಡಲಾಗುತ್ತದೆ.
3	ಧನಶ್ರೀ ಯೋಜನೆ	1. ಅರ್ಜಿದಾರರು ಹೆಚ್.ಐ.ವಿ. ಸೋಂಕಿತರೆಂದು ಆರೋಗ್ಯ ಕೇಂದ್ರದಲ್ಲಿ/ಐ.ಸಿ.ಟಿ.ಸಿ. ಕೇಂದ್ರಗಳಲ್ಲಿ ಪಡೆದ ವೈದ್ಯಕೀಯ ವರದಿಯನ್ನು ಹೊಂದಿರುವುದು. 2. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. 3.ಅರ್ಜಿದಾರರು ರಾಷ್ಟ್ರೀಕೃತ ಬ್ಯಾಂಕ್ ಖಾತೆಯನ್ನು ಹೊಂದಿದ್ದು, ಚಾಲ್ತಿಯಲ್ಲಿರಬೇಕು. 4.ಅರ್ಜಿದಾರರು 18 ರಿಂದ 60 ವರ್ಷದೊಳಗಿರಬೇಕು. 5. ಅರ್ಜಿದಾರರು ಖಾತೆ ಹೊಂದಿರುವ ಆರ್ಥಿಕ ಸಂಸ್ಥೆ/ ಬ್ಯಾಂಕುಗಳಲ್ಲಿ ಸಾಲಗಾರರಾಗಿರಬಾರದು.
4	ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ	1. ವಯೋಮಿತಿ 18 ವರ್ಷ ಮೀರಿರಬೇಕು. 2.ಲಿಂಗತ್ವ ಅಲ್ಪಸಂಖ್ಯಾತರು ಸಮುದಾಯ ಆಧಾರಿತ ಸಂಸ್ಥೆ ಅಥವಾ ಜಿಲ್ಲಾಧಿಕಾರಿಗಳು ಅನುಮೋದಿಸಿದ ಸಂಸ್ಥೆಗಳಾದ ಸಂಗಮ ಅಥವಾ ಕೆ.ಎಸ್.ಎಂ.ಎಫ್. ಸಂಸ್ಥೆಗಳಲ್ಲಿ ನೊಂದಣಿಯಾಗಿರಬೇಕು. 3.ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ ಸೀಡಿಂಗ್ ಆಗಿರಬೇಕು. 4.ಯಾವುದೇ ಬ್ಯಾಂಕು/ಸಂಸ್ಥೆಗಳಲ್ಲಿ ಸುಸ್ತಿದಾರರಾಗಿರಬಾರದು ಎನ್ನುವುದು ಕಡ್ಡಾಯವಾಗಿರುತ್ತದೆ. 5. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.
5	ಬಡ್ಡಿ ಸಹಾಯಧನ ಯೋಜನೆ (ಕೆ.ಎಸ್.ಎಫ್.ಸಿ. ಮುಖಾಂತರ)	1.ಹಾಲಿ ಕಾರ್ಯನಿರ್ವಹಿಸುತ್ತಿರುವ ಸಣ್ಣ/ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಉದ್ದಿಮೆದಾರರಿಗೆ ತಮ್ಮ ಘಟಕವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ/ ಆಧುನೀಕರಣಗೊಳಿಸುವ ಸಲುವಾಗಿ. ಘಟಕ ವೆಚ್ಚ ಕನಿಷ್ಠ ರೂ.5ಲಕ್ಷದಿಂದ ಗರಿಷ್ಠ ರೂ.2ಕೋಟಿಗಳ ವರೆಗೆ ಆರ್ಥಿಕ ನೆರವು ಒದಗಿಸಲಾಗುವುದು. 2. * ಈ ಘಟಕದ ಮಾಲೀಕರು ಮಹಿಳಾ ಅಭ್ಯರ್ಥಿಯಾಗಿರಬೇಕು. * ಪಾಲುದಾರಿಕೆಯ ಉದ್ಯಮ/ನಿಯಮಿತ ಕಂಪನಿಗಳಲ್ಲಿ ಹೆಚ್ಚಿನ ಷೇರು/ನಿರ್ದೇಶಕರು ಶೇ 5ರಷ್ಟು ಇರಬೇಕು. * ಫಲಾನುಭವಿಗಳು ಒಂದು ಸಲ ಮಾತ್ರ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.
6	ಮಾಜಿ ದೇವದಾಸಿ ಪುನರ್ವಸತಿ ಯೋಜನೆ(ಆದಾಯೋತ್ಪನ್ನಕರ ಚಟುವಟಿಕೆ)	1. 1993-94 ಹಾಗೂ 2007-08ನೇ ಸಾಲಿನಲ್ಲಿ ಮಾಡಿದ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟಿರಬೇಕು. 2. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ ಸೀಡಿಂಗ್ ಆಗಿರಬೇಕು. 3. ಯಾವುದೇ ಬ್ಯಾಂಕು/ಸಂಸ್ಥೆಗಳಲ್ಲಿ ಸುಸ್ತಿದಾರರಾಗಿರಬಾರದು ಎನ್ನುವುದು ಕಡ್ಡಾಯವಾಗಿರುತ್ತದೆ. 4. ಮಾಜಿ ದೇವದಾಸಿ ಮಹಿಳೆಯರಿಗೆ ಇ.ಡಿ.ಪಿ. ತರಬೇತಿಯೊಂದಿಗೆ , ಸೌಲಭ್ಯ ನೀಡಲಾಗುತ್ತದೆ. 5. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.